ಒಟ್ಟು ಪ್ರಶ್ನೆಗಳ ಸಂಖ್ಯೆ : 26 ] [ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8

Total No. of Questions : 26 ] [ Total No. of Printed Pages : 8

**ಸಂಕೇತ ಸಂಖ್ಯೆ : 242-EK (NS)**

**Code No. : 242-EK (NS)**

**ಶಿಕ್ಷಣ**

**EDUCATION**

# ರೂಢಿಯಾಗಿ ಶಿಕ್ಷಣ

# EDUCATION AS PRACTICE

(ಕನ್ನಡ ಮತ್ತು ಇಂಗ್ಲಿಷ್ ಭಾಷಾಂತರ)

(Kannada & English Versions)

**(ಹೊಸ ಪಠ್ಯವಸ್ತು)**

**(New Syllabus)**

ದಿನಾಂಕ : 05. 06. 2017 ]

Date : 05. 06. 2017 ]

ಸಮಯ : ಮಧ್ಯಾಹ್ನ 2.00 ರಿಂದ 5.00 ರವರೆಗೆ ] [ ಗರಿಷ್ಠ ಅಂಕಗಳು : 60

Time : 2.00 P.M. to 5.00 P.M. ] [ Max. Marks : 60

*ಅಭ್ಯರ್ಥಿಯ ನೋಂದಣಿ ಸಂಖ್ಯೆ*

*Register Number of the Candidate*

(ಕನ್ನಡ ಭಾಷಾಂತರ)

( Kannada Version )

**ಭಾಗ – I**

ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಸೂಕ್ತವಾದ ಒಂದು ಆಯ್ಕೆಯನ್ನು ಆರಿಸಿ ಬರೆಯಿರಿ. ಪ್ರತಿ ಪ್ರಶ್ನೆಗೆ ಒಂದು ಅಂಕ ನೀಡಲಾಗಿದೆ. ಪ್ರತಿ ಪ್ರಶ್ನೆಯೂ ಕಡ್ಡಾಯ : $10 \times 1 = 10$

1. ಪಠ್ಯಕ್ರಮ ಮತ್ತು ಪಠ್ಯವಸ್ತುವನ್ನು ನಮ್ಮ ರಾಜ್ಯದಲ್ಲಿ ತಯಾರಿಸುವ ಜವಾಬ್ದಾರಿ ಹೊಂದಿರುವ ಸಂಸ್ಥೆ

   (A) KSQAAC (B) KSEEB

   (C) DSERT (D) DIET

2. ಡ್ಯೂಯಿಯ ಕಲ್ಪನೆಯನ್ನು ಮಾರ್ಪಡಿಸಿ, ಬೋಧನೆಯನ್ನು ಸ್ವಾವಲೋಕನ ಅಭ್ಯಾಸವಾಗಿ ಮಾಡಿದ ಹೆಗ್ಗಳಿಗೆಗೆ ಪಾತ್ರರಾದವರು

   (A) ರಾಬರ್ಟ್ ಗ್ಯಾನೆ (B) ಗಿಬ್ಸ್

   (C) ಜಾನ್‌ಸನ್ (D) ಆ್ಯಂಡ್ರ್ಯೂ ಪೊಲ್ಲಾರ್ಡ್

3. ರಚನಾವಾದಿ ಶಿಕ್ಷಣ ಪದ್ಧತಿಗಾಗಿ ಶಾಲಾ ಸಂಸ್ಕೃತಿಯು ಹೊಂದಿರಬೇಕಾದ ಅಂಶಗಳೆಂದರೆ

I. ಸೃಜನಶೀಲ ಚಿಂತನೆಗೆ ಅವಕಾಶ

II. ಶ್ರೇಷ್ಠತೆಗಾಗಿ ಸ್ವಭಾವ ರೂಢಿಸುವುದು

III. ತಪ್ಪುಗಳಾಗದಂತೆ ನೋಡಿಕೊಳ್ಳುವುದು

IV. ಶಿಕ್ಷಕರಿಗೆ ಸ್ವಾತಂತ್ರ್ಯ ನೀಡುವುದು

(A) I, II ಮತ್ತು IV (B) I ಮತ್ತು III

(C) I, II ಮತ್ತು III (D) II, III ಮತ್ತು IV

4. ಕಲಿಕಾರ್ಥಿಗಳನ್ನು ಆಳವಾದ ತಿಳುವಳಿಕೆಯತ್ತ ಮಾರ್ಗದರ್ಶಿಸಲು ಶಿಕ್ಷಕರು ರೂಪಿಸಬೇಕಾದ ಚಟುವಟಿಕೆಗಳೆಂದರೆ

(A) ತೊಡಗಿಸುವ ಹಂತದ ಚಟುವಟಿಕೆಗಳು

(B) ವಿವರಣಾ ಹಂತದ ಚಟುವಟಿಕೆಗಳು

(C) ಅನ್ವೇಷಣಾ ಹಂತದ ಚಟುವಟಿಕೆಗಳು

(D) ಮೌಲ್ಯಮಾಪನ ಹಂತದ ಚಟುವಟಿಕೆಗಳು

5. ಸಂಪನ್ಮೂಲಗಳ ಬಳಕೆಯ ಪ್ರಮುಖ ಉದ್ದೇಶ

(A) ಪ್ರೇರೇಪಿಸುವುದು (B) ಕಲಿಕೆಯನ್ನು ಅನುಕೂಲಿಸುವುದು

(C) ಆಕರ್ಷಿಸುವುದು (D) ಬೋಧನೆಗೆ ಪೂರಕವಾಗಿ ಬಳಸುವುದು

6. ಸಹಕಾರಿ ಕಲಿಕೆಯ ಅನ್ವಯವೆಂದರೆ

I. ವಿಕಸನ ಸಮೀಪ ವಲಯದಲ್ಲಿ ಮಗುವಿಗೆ ಆಸರೆ ನೀಡುವುದು

II. ಬೋಧನಾ–ಕಲಿಕಾ ಪ್ರಕ್ರಿಯೆಯಲ್ಲಿ ಹೆಚ್ಚಿನ ಸಹಕಾರ ನೀಡುವುದು

III. ಗುಂಪುಗಳಲ್ಲಿ ಕಲಿಕೆಯನ್ನು ಪ್ರೋತ್ಸಾಹಿಸುವುದು

IV. ಪರಸ್ಪರ ನೆರವಿನಿಂದ ಕಲಿಯಲು ಉತ್ತೇಜಿಸುವುದು

(A) I, III ಮತ್ತು IV (B) II ಮತ್ತು IV

(C) I ಮತ್ತು II (D) II, III ಮತ್ತು IV

7. ಶಾಲಾ ಅಭಿವೃದ್ಧಿಗೆ ಅತ್ಯಂತ ಪ್ರಮುಖವಾದುದು

(A) ಸಿಬ್ಬಂದಿಗಳ ನೇಮಕಾತಿ (B) ಸಿಬ್ಬಂದಿಗಳ ಸ್ವಯಂಕಲಿಕೆ

(C) ಸಿಬ್ಬಂದಿಗಳ ಸಹೋದ್ಯೋಗಿತ್ವ (D) ಸಿಬ್ಬಂದಿಗಳಿಗೆ ನೀಡುವ ಸೌಲಭ್ಯಗಳು

8. NCF 2005 ಶಿಫಾರಸ್ಸಿನ ಪ್ರಕಾರ ಮಕ್ಕಳ ಜ್ಞಾನರಚನೆಗೆ ತೊಡಕಾಗಿರುವುದು

(A) ಪ್ರಶ್ನಿಸುವಿಕೆ (B) ಕಂಠಪಾಠ ಕಲಿಕೆ

(C) ಸ್ವಾವಲೋಕನ (D) ಸಹಕಾರಿ ಕಲಿಕೆ

9. ತಾದಾತ್ಮ್ಯಾನುಭೂತಿಯ ಅಗತ್ಯ ಲಕ್ಷಣವೆಂದರೆ
   (A) ಮಾನಸಿಕ ಸ್ಥಿರತೆ (B) ಬಹುಮುಖಿ ಚಿಂತನೆ
   (C) ಪರಿಣಾಮಗಳನ್ನು ಊಹಿಸುವುದು (D) ಸಂವೇದನಾಶೀಲತೆ
10. 'ಹೊರೆ ರಹಿತ ಕಲಿಕೆ'ಯ ಶಿಫಾರಸ್ಸು ಮಾಡಿದ ವರದಿ
   (A) ಕೊಠಾರಿ ವರದಿ (B) ವುಡ್ಸ್ ವರದಿ
   (C) ಯಶ್‌ಪಾಲ್ ವರದಿ (D) ಮೊದಲಿಯಾರ್ ವರದಿ

## ಭಾಗ – II

ಈ ಕೆಳಗಿನವುಗಳಲ್ಲಿ ಯಾವುದಾದರೂ **ಐದು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ. ಪ್ರತಿಯೊಂದು ಉತ್ತರವು ಅರ್ಧ ಪುಟಕ್ಕೆ ಮೀರದಿರಲಿ : $5 \times 2 = 10$

11. ವಿದ್ಯಾರ್ಥಿಗಳಲ್ಲಿ ಸ್ವ–ಅರಿವಿನ ಕೌಶಲವನ್ನು ಹೇಗೆ ಬೆಳೆಸುವಿರಿ ?
12. ಸ್ಥಾನಚಿತ್ರಣ ವರದಿಯಲ್ಲಿ ಶಿಫಾರಸ್ಸು ಮಾಡಿರುವ ತರಗತಿ ಸಂವಹನವನ್ನು ಮಾರ್ಗದರ್ಶಿಸುವ ಯಾವುದಾದರೂ ಎರಡು ತತ್ವಗಳನ್ನು ವಿವರಿಸಿ.
13. ಶಿಕ್ಷಕರು ಬಹುಕಾರ್ಯ ಚತುರರಾಗಿರಬೇಕು. ಏಕೆ ?
14. ಉತ್ತಮ ಶಾಲಾ ಪಂಚಾಂಗವು ಯಾವ ಅಂಶಗಳಿಂದ ನಿರ್ಧರಿಸಲ್ಪಡುತ್ತದೆ ?
15. ವೈಗಾಟ್‌ಸ್ಕಿಯವರ ಜ್ಞಾನಾತ್ಮಕ ವಿಕಸನ ಸಿದ್ಧಾಂತದ ಯಾವುದಾದರೂ ಎರಡು ಅಂಶಗಳನ್ನು ವಿವರಿಸಿ.
16. ಶಾಲೆಯಲ್ಲಿ ಸಹಭಾಗಿ ತೀರ್ಮಾನ ಕೈಗೊಳ್ಳುವಿಕೆಯ ಮಹತ್ವವನ್ನು ವಿವರಿಸಿ.
17. ವಿದ್ಯಾರ್ಥಿಗಳಲ್ಲಿ ಸೃಜನಶೀಲ ಚಿಂತನೆಯನ್ನು ಹೇಗೆ ಪೋಷಿಸುವಿರಿ ?
18. ಶಾಲಾ ಪಠ್ಯಕ್ರಮ ಸಂವಹನದಲ್ಲಿ ಪಠ್ಯಪುಸ್ತಕದ ಪಾತ್ರ ಹೇಗಿರಬೇಕು ?

## ಭಾಗ – III

ಈ ಕೆಳಗಿನ ಪ್ರತಿ ಪ್ರಶ್ನೆಗೂ ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಒಂದಕ್ಕೆ ಉತ್ತರಿಸಿ. ಪ್ರತಿಯೊಂದು ಉತ್ತರವು ಒಂದು ಪುಟಕ್ಕೆ ಮೀರದಂತೆ ಉತ್ತರಿಸಿ : $8 \times 5 = 40$

19. ಒಳಗೊಳ್ಳುವ, ಕಲಿಕಾ ಸ್ನೇಹಿ ತರಗತಿಯನ್ನು ಸೃಷ್ಟಿಸಲು ನೀವು ಯೋಜಿಸುವ ಕ್ರಮಗಳನ್ನು ಉದಾಹರಣೆಯೊಂದಿಗೆ ಚರ್ಚಿಸಿ.

*ಅಥವಾ*

ಹೊರೆರಹಿತ ಕಲಿಕೆಯಲ್ಲಿ ಮೌಲ್ಯಾಂಕನದ ಪಾತ್ರವನ್ನು ಐದು ಮೌಲ್ಯಾಂಕನ ಸಾಧನಗಳ ಉದಾಹರಣೆಯೊಂದಿಗೆ ಚರ್ಚಿಸಿ.

20. ಶಾಲಾ ನಿರ್ವಹಣಾ ವ್ಯವಸ್ಥೆಯಲ್ಲಿ ಕೆಳಕಂಡ ಅಂಶಗಳ ಮಹತ್ವವನ್ನು ನಿಕಟಸೇವಾ ಅವಧಿಯ ನಿಮ್ಮ ಅನುಭವದ ಹಿನ್ನೆಲೆಯಲ್ಲಿ ವಿವರಿಸಿ.
   i) ದೂರದೃಷ್ಟಿ
   ii) ಯೋಜಿಸುವಿಕೆ

*ಅಥವಾ*

ಶಾಲೆಯು ಉತ್ತಮ ಸಂಸ್ಥೆಯಾಗಿ ರೂಪುಗೊಳ್ಳುವಲ್ಲಿ ಈ ಕೆಳಕಂಡ ಘಟಕಾಂಶಗಳ ಪಾತ್ರವನ್ನು ವಿವರಿಸಿ :
   i) ಅಂತರ್ ಸಂಪರ್ಕ ಮತ್ತು ಪಾಲುದಾರಿಕೆ
   ii) ಸಂಪನ್ಮೂಲಗಳು

21. ವಿಮರ್ಶಾತ್ಮಕ ಶಿಕ್ಷಣ ಪದ್ಧತಿಯನ್ನು ಅನುಸರಿಸುವ ಶಿಕ್ಷಕರಾಗಿ, ನಿಮ್ಮ ಆಯ್ಕೆಯ ಪಾಠಕ್ಕೆ ವಿದ್ಯಾರ್ಥಿಗಳಿಗೆ ನೀವು ನೀಡಬಹುದಾದ ಐದು ಅನುಭವಗಳನ್ನು ಕುರಿತು ಬರೆಯಿರಿ.

***ಅಥವಾ***

ನಿಮ್ಮ ಆಯ್ಕೆಯ ಪಾಠದ ಕಲಿಕೆಯನ್ನು ಅನುಕೂಲಿಸಲು ಚಟುವಟಿಕೆ ಆಧಾರಿತ ಕಲಿಕಾ ಪದ್ಧತಿಯನ್ನು ಹೇಗೆ ಅಳವಡಿಸುವಿರಿ ? ಯಾವುದಾದರೂ ಐದು ಕ್ರಮಗಳನ್ನು ಉದಾಹರಿಸಿ.

22. ಮಾನವ ಸಂಪನ್ಮೂಲ ಒಂದು ಕಲಿಕಾ ಸಂಪನ್ಮೂಲವಾಗಿದೆ. ಹೇಗೆ ? ಉದಾಹರಣೆಯೊಂದಿಗೆ ವಿವರಿಸಿ.

***ಅಥವಾ***

ಕಲಿಕಾ ಸಂಪನ್ಮೂಲಗಳು ಸೌಂದರ್ಯ ಪ್ರಜ್ಞೆಯನ್ನು ಹೇಗೆ ಬೆಳೆಸುತ್ತವೆ ? ಉದಾಹರಣೆಯೊಂದಿಗೆ ವಿವರಿಸಿ.

23. ಶಿಶುಕೇಂದ್ರಿತ ಶಿಕ್ಷಣ ಪದ್ಧತಿಯು ಹೊಂದಿರಬೇಕಾದ ಯಾವುದಾದರೂ ಐದು ಲಕ್ಷಣಗಳನ್ನು ವಿವರಿಸಿ.

***ಅಥವಾ***

ಶಿಕ್ಷಕರಿಗೆ ಸ್ವಾವಲೋಕನ ಜರ್ನಲ್ ತರಗತಿ ಪ್ರಕ್ರಿಯೆಯಲ್ಲಿ ಹೇಗೆ ಸಹಾಯವಾಗಬಲ್ಲದೆಂಬುದನ್ನು ವಿವರಿಸಿ.

24. ನಿಮ್ಮ ಆಯ್ಕೆಯ ಕಲಿಕಾಂಶ ವಿಷಯವೊಂದಕ್ಕೆ ಐದು ಕಲಿಕಾ ಸಂಪನ್ಮೂಲಗಳನ್ನು ಆಯ್ಕೆ ಮಾಡಿ, ನಿಮ್ಮ ಆಯ್ಕೆಯನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸಿ.

***ಅಥವಾ***

ಚಟುವಟಿಕೆಗಳು ಕಲಿಕಾ ಸಂಪನ್ಮೂಲಗಳಾಗಿವೆ. ಹೇಗೆ ? ಉದಾಹರಣೆಯೊಂದಿಗೆ ವಿಶ್ಲೇಷಿಸಿ.

25. ಸಾಂಪ್ರದಾಯಿಕ ತರಗತಿಗಿಂತ ರಚನಾವಾದಿ ತರಗತಿಯು ಹೇಗೆ ಭಿನ್ನವಾಗಿದೆ ? ಯಾವುದಾದರೂ ಐದು ಲಕ್ಷಣಗಳನ್ನು ಉದಾಹರಣೆಗಳೊಂದಿಗೆ ವಿಶದೀಕರಿಸಿ.

***ಅಥವಾ***

ಕಲಿಕಾರ್ಥಿ ಕೇಂದ್ರಿತ ತರಗತಿಯನ್ನು ರೂಪಿಸುವಲ್ಲಿ ಶಿಕ್ಷಕರ ಪಾತ್ರ ಹಾಗೂ ಜವಾಬ್ದಾರಿಗಳನ್ನು ಉದಾಹರಣೆಗಳೊಂದಿಗೆ ವಿಶದೀಕರಿಸಿ.

26. ವಿದ್ಯಾರ್ಥಿಗಳಲ್ಲಿ ನಿರ್ಧಾರಗಳನ್ನು ಕೈಗೊಳ್ಳುವ ಕೌಶಲಗಳಿರುವುದನ್ನು ಹೇಗೆ ಗುರುತಿಸುವಿರಿ ? ಉದಾಹರಣೆಯೊಂದಿಗೆ ಚರ್ಚಿಸಿ.

***ಅಥವಾ***

ವಿದ್ಯಾರ್ಥಿಗಳಲ್ಲಿ ಒತ್ತಡ ನಿಭಾವಣೆಯ ಕೌಶಲಗಳನ್ನು ಹೇಗೆ ಬೆಳೆಸುವಿರಿ ? ಉದಾಹರಣೆಯೊಂದಿಗೆ ಚರ್ಚಿಸಿ.

**( English Version )**

**PART – I**

Four choices have been given for each of the following questions. Choose the most appropriate answer and write in the answer-book. All the questions are compulsory. $10 \times 1 = 10$

1. In our state, the institution that has the responsibility for preparing curriculum and syllabus is

   (A) KSQAAC (B) KSEEB

   (C) DSERT (D) DIET.

2. The one who credited with adapting Dewey's ideas to seeing teaching as reflective practice is

   (A) Robert Gagne (B) Gibbs

   (C) Johnson (D) Andrew Pollard.

3. The factors that a school culture must have for the constructivist pedagogy are

   (I) The opportunities for creative thinking

   (II) The disposition for excellence

   (III) The space for making no mistakes

   (IV) The space for teacher autonomy.

   (A) I, II and IV (B) I and III

   (C) I, II and III (D) II, III, and IV.

4. The activities to be planned by a teacher to guide learners toward a deeper understanding are

   (A) Engage activities (B) Explain activities

   (C) Explore activities (D) Evaluate activities.

5. The key purpose of using resources is to

(A) motivate student
(B) facilitate learning
(C) attract learners
(D) supplement teaching.

6. The applications of co-operative learning are

(I) helping the child in his or her zone of proximal development
(II) providing more co-operation in the teaching-learning process
(III) encouraging learning in groups
(IV) motivating students to help each other learn.

(A) I, III and IV
(B) II and IV
(C) I and II
(D) II, III and IV.

7. Which of the following is critical for school development ?

(A) The appointment of staff
(B) The staff's self learning
(C) The collegiality among staff
(D) The facilities given to staff.

8. According to the recommendations of NCF 2005, the hurdle for children to construct knowledge is

(A) questioning
(B) rote-learning
(C) reflection
(D) co-operative learning.

9. The essential component of empathy is

(A) Mental stability
(B) Divergent thinking
(C) Anticipation of consequences
(D) Sensitivity.

10. The report that recommended 'learning without burden' is

(A) Kothari report
(B) Wood's report
(C) Yashpal report
(D) Mudaliar report.

**PART – II**

Answer any *five* of the following questions, each answer not exceeding *half a* page. $5 \times 2 = 10$

11. How do you develop the skill of self-awareness in your students ?

12. Explain any two principles suggested in the position paper that guide the classroom transactions.

13. Teachers have to be 'versatile'. Why ?

14. By which factors, is a good school calendar determined ?

15. Explain any two aspects of Vygotsky's cognitive development theory.

16. Explain the importance of participatory decision-making in schools.

17. How do you foster creative thinking among your students ?

18. How should it be the role of a textbook in the school curriculum transaction ?

**PART – III**

There is an alternate question for each of the following. Answer either of them, each answer not exceeding *one* page. $8 \times 5 = 40$

19. Discuss the measures that you take to create inclusive, learning-friendly classroom with examples.

*OR*

Discuss the role of assessment in 'learning without burden' with examples of five assessment tools.

20. Based on your internship experience, explain the importance of the following core processes of the school management system :

i) Visioning

ii) Planning.

*OR*

Explain the role of the following components in making a school as a good organization :

i) Inter-linkages and partnerships

ii) Resources.

21. As a teacher of following critical pedagogy, write about any five experiences that you can provide to your students for a topic of your choice.

*OR*

How do you use activity based learning method to facilitate a lesson of your choice ? Give examples of any five ways.

22. 'Human resource is a learning resource.' How ? Explain with examples.

*OR*

How do learning resources develop aesthetic sense ? Explain with examples.

23. Explain any five features of child-centered pedagogy.

*OR*

How is a reflective journal helpful for a teacher in the classroom process ? Explain.

24. Select any five learning resources for a topic of your choice. Critically analyse your choices.

*OR*

Activities are learning resources. Analyse with examples.

25. How is a constructivistic classroom different from a traditional classroom ? Illustrate any five features with examples.

*OR*

Illustrate the role and responsibilities of a teacher in creating learner-centred classroom.

26. How do you identify the existing decision-making skills in your students ? Discuss with examples.

*OR*

How do you develop the skill of coping with stress in your students ? Discuss with examples.